# ‘ಟೀವಿ ಅಕ್ಕಿ ರೊಟ್ಟಿ ಇದ್ದಂಗೆ!

## ದಾನಪ್ಪ ಬಸಪ್ಪ ಮೂಡಲಗಿ

ಉದಯದ ‘ನೇತ್ರಾವತಿ’ ದಾನಪ್ಪ



◆ **ಈಗ ಏನು ಮಾಡ್ತಿದ್ದೀರಿ?**

ಉದಯದ ‘ನೇತ್ರಾವತಿ’ಯಲ್ಲಿ ನೆಗೆಟಿವ್ ಛಾಯೆಯ ಕಾಮಿಡಿ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಉತ್ತರ ಕರ್ನಾಟಕದ ಹಳ್ಳಿಯ ಯುವಕನ ಪಾತ್ರವೊಂದನ್ನು ಆ ಧಾರಾವಾಹಿಯಲ್ಲಿ ರೂಪಿಸಬೇಕಿತ್ತು. ಅದಕ್ಕಾಗಿ ನನ್ನನ್ನು ಕರೆದಿದ್ದರು. ಮೊದಲ ದಿನ ನನ್ನ ಹೆಸರು ಕೇಳಿ ಆ ಪಾತ್ರಕ್ಕೆ ನನ್ನ ಹೆಸರನ್ನೇ ಇಟ್ಟರು. ಬೇರೆ ಹೆಸರು ಬೇಡ. ನೇಟಿವ್ ಹೆಸರೇ ಇರಲಿ ಎಂದು ಅದನ್ನು ನಿರ್ಧರಿಸಿದರು. ಇದು ದೇಸಿ ಸೊಗಡಿನ ಭಾಷೆಯ ಕಾರಣಕ್ಕೆ ಮಹತ್ವದ ಪಾತ್ರ.

◆ **ಬಾಲ್ಯದಲ್ಲಿ ನಟನೆಯ ಪ್ರೀತಿ ಹುಟ್ಟಿದ್ದು ಹೇಗೆ?**

ಬಾಗಲಕೋಟೆ ಜಿಲ್ಲೆ, ರಬಕವಿ ಬನಹಟ್ಟಿ ತಾಲ್ಲೂಕು ಮಗಾಲಿಂಗಪುರ ನಮ್ಮೂರು. ವೃತ್ತಿರಂಗಭೂಮಿ ತಂಡಕ್ಕೆ ವೇದಿಕೆಯಂತಿತ್ತು ಆ ಊರು. ವರ್ಷದಲ್ಲಿ ಮೂರು–ನಾಲ್ಕು ಕಂಪನಿಗಳು ಇಲ್ಲಿ ಕ್ಯಾಂಪ್ ಹಾಕುತ್ತಿದ್ದವು. ಬಾಲ್ಯದಲ್ಲಿ ನಾಟಕ ನೋಡುವ ಹುಚ್ಚು ಇತ್ತು. ನೋಡ್ತಾ ನೋಡ್ತಾ ಪಾರ್ಟ್ ಮಾಡಬೇಕು ಅನ್ನುವ ಆಸೆ ಬಂತು. ಶಾಲೆಯಲ್ಲಿ ಏಕಪಾತ್ರ ಅಭಿನಯ ಮಾಡುತ್ತಿದ್ದೆ. ಊರಲ್ಲಿ ನಾವೇ ದುಡ್ಡು ಹಾಕಿಕೊಂಡು ನಾಟಕವನ್ನು ಆಡಲು ಶುರು ಮಾಡಿದೆವು. ನನಗಾಗ 14 ವರ್ಷ. ಯೂತ್ ಫೆಸ್ಟಿವಲ್ ಗೆದ್ದೆವು. ಅದಾದ ಮೇಲೆ ನೀನಾಸಂ ಸಾಂಸ್ಕೃತಿಕ ಶಿಬಿರಕ್ಕೆ ಹೋಗುವ ಅಭಿಲಾಷೆ ಮೂಡಿತು. ಭಾಗವಹಿಸುವ ಆರ್ಥಿಕ ಶಕ್ತಿ ಇರಲಿಲ್ಲ ಅದೃಷ್ಟಕ್ಕೆ ನಮ್ಮೂರಲ್ಲಿ ಗುರಲಿಂಗಪ್ಪ ಅಮ್ಮಣಗಿ ಅವರು ಪ್ರತಿ ವರ್ಷ ಇಬ್ಬರನ್ನು ಅವರ ಹಣದಿಂದ ಕಳಿಸಿಕೊಡುತ್ತಾರೆ ಆ ವರ್ಷ ನನ್ನನ್ನು ಕಳಿಸಿಕೊಟ್ಟರು. ನಂತರ ಮೂರು ವರ್ಷ ನಿರಂತರವಾಗಿ ನಾನೇ ಹೋದೆ.

ಅಲ್ಲಿ ಸುಬ್ಬಣ್ಣ, ಅನಂತಮೂರ್ತಿ, ಸಿಜಿಕೆ ಅವರನ್ನು ಭೇಟಿಯಾಗುವ ಸೌಭಾಗ್ಯ ನನಗೆ ಸಿಕ್ಕಿತು. ಅಲ್ಲೇ ಡಿಪ್ಲೊಮಾ ಮಾಡಲು 2006ರಲ್ಲಿ ಸೇರಿದೆ. ಮುಗಿಸುವಷ್ಟರಲ್ಲಿ ಎಂ.ಪಿ. ಪ್ರಕಾಶ್ ಅವರು ಹೂವಿನಹಡಗಲಿಯಲ್ಲಿ ‘ರಂಗಯಾತ್ರೆ’ ತಂಡವನ್ನು ಕಟ್ಟಿದರು. ಅದಕ್ಕೆ ಏಣಗಿ ನಟರಾಜ್ ನಿರ್ದೇಶಕರಾಗಿದ್ದರು. ಹಾಗಾಗಿ ನೀನಾಸಂ ರಂಗ ತಿರುಗಾಟವನ್ನು ಬಿಟ್ಟು ಹಡಗಲಿಗೆ ನನ್ನ ಪ್ರಯಾಣ ಬೆಳೆಯಿತು. ಅಲ್ಲಿ ‘ಮಹಾಮಾಯಿ’, ‘ಶಂಭೋ ಶಿವಶಂಕರ’ ನಾಟಕ ಸಿದ್ಧವಾದವು. ಆ ನಾಟಕಗಳ ತಿರುಗಾಟ ಬೆಂಗಳೂರಿಗೆ ಬರುವಷ್ಟರಲ್ಲಿ ಧಾರಾವಾಹಿಯಲ್ಲಿ ಸಣ್ಣ ಸಣ್ಣ ಪಾತ್ರ ಮಾಡುವಷ್ಟು ಕಿರುತೆರೆಯಲ್ಲಿ ಸ್ನೇಹ ಬೆಳೆದಿತ್ತು. ಕೆ.ಆರ್.ಪುರಂ ಸರ್ಕಾರಿ ಕಾಲೇಜಿಗೆ ನಾಟಕ ಕಲಿಸಲು ಆಹ್ವಾನಿಸಿದರು. ಮೂರು ವರ್ಷ ಕಾಲೇಜು ಮಕ್ಕಳಿಗೆ ನಾಟಕ ಮಾಡಿಸಿದೆ. ‘ಹೆಳವನಕಟ್ಟೆ ಗಿರಿಯಮ್ಮ’, ‘ಮಹಾನವಮಿ’, ‘ರಾಘವೇಂದ್ರ ವೈಭವ’, ‘ಪಂಚರಂಗಿ ಪಾಂವ್ ಪಾಂವ್’, ‘ಸೂಪರ್ ಜೋಡಿ’ ರಿಯಾಲಿಟಿ ಶೋ ‘ಮಂಗಳಗೌರಿ’, ‘ಕಮಲಿ’ ಮಾಡುವಾಗಲೇ ‘ಕಾಮಿಡಿ ಕಿಲಾಡಿಗಳು’ ಮೂರನೇ ಸೀಸನ್‌ಗೆ ಹೋದೆ. ಅದು ತುಂಬ ಹೆಸರು ತಂದುಕೊಡ್ತು. ‘ರತ್ನನ ಪ್ರಪಂಚ’, ‘ಮುಖ್ಯಮಂತ್ರಿ ಕಳೆದುಹೋದ್ನಪ್ಪ’, ‘ಎಂಆರ್‌ಪಿ’, ‘ವೇದ’, ‘ಬಯಲು ಸೀಮೆ’ ಸಿನಿಮಾಗಳಲ್ಲಿಯೂ ನಟಿಸುವ ಅವಕಾಶ ಸಿಕ್ಕಿತು.

◆ **ರಂಗಭೂಮಿಯನ್ನು ಮಿಸ್ ಮಾಡಿಕೊಂಡೆ ಅಂತ ಅನ್ನಿಸುತ್ತಿಲ್ಲವೇ?**

ಖಂಡಿತ. ಮುಂದಿನ ಕನಸು ರಂಗಚಟುವಟಿಕೆ. ಒಂದೆರಡು ವರ್ಷ ಅಷ್ಟೇ ಇಲ್ಲಿ ಇರುವುದು. ಇದರ ಫೀಲಿಂಗ್ ಮುಗಿದಿದೆ. ಇದು ಹೇಗೆಂದರೆ ಅಕ್ಕಿ ರೊಟ್ಟಿ ಇಟ್ಟುಕೊಂಡಂತೆ. ಕೂಡಲೇ ತಿನ್ನಬೇಕು, ಇಲ್ಲದಿದ್ದರೆ ಅದು ಒಣಗಿ ತಿನ್ನಲು ಆಗದ ಸ್ಥಿತಿಗೆ ತಲುಪುತ್ತದೆ. ಹಾಗಾಗಿ ನನ್ನ ಮೂಲ ಉದ್ದೇಶವೇ ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಚಟುವಟಿಕೆಯನ್ನು ಉದ್ದೀಪನ ಮಾಡುವುದು. ಅಲ್ಲಿ ಹೊಸ ಹೊಸ ನಟ–ನಟಿಯರನ್ನು ಹೊರತರಬೇಕು. ಬೆಂಗಳೂರಿನಲ್ಲಿ ಇದಕ್ಕೆ ಸಾಕಷ್ಟು ಅವಕಾಶ ಇವೆ. ಹಳ್ಳಿಯಲ್ಲಿ ಇಲ್ಲ. ಸ್ವತಃ ನನ್ನ ಕುಟುಂಬ ಊರಲ್ಲಿ ಇದೆ. ನನ್ನ ಮಕ್ಕಳಿಗೆ ಏನಾದರೂ ಕಲಿಸೋಣ ಅಂದರೂ ಸಾಧ್ಯ ಆಗುತ್ತಿಲ್ಲ. ಸೌಲತ್ತುಗಳಿಲ್ಲದ ಆ ಪ್ರದೇಶದಲ್ಲಿ ಅದನ್ನು ಕಲ್ಪಿಸುವ ಆಸೆ. ಇಲ್ಲಿಂದ ಸಂಪೂರ್ಣ ಬಿಡುಗಡೆ ಹೊಂದಿ ಸ್ವತಃ ನಾನೇ ಇನ್ನೇನಾದರೂ ಭಿನ್ನವಾಗಿ ಮಾಡಬೇಕು.

◆ **ಟೀವಿಯಲ್ಲಿ ಅಶ್ಲೀಲತೆ, ನೆಗೆಟಿವ್ ಪಾತ್ರಗಳ ಮೆರವಣಿಗೆ ಹೆಚ್ಚು ಎನ್ನುವ ಆರೋಪಕ್ಕೆ ಏನು ಹೇಳ್ತೀರಿ?**

ಹಾಸ್ಯಕ್ಕೆ ಡಬಲ್ ಮೀನಿಂಗ್ ಬಳಸುವ ಅಗತ್ಯ ಇಲ್ಲ. ಈಗ ಅಂತರ್ಜಾಲದ ಮೊಬೈಲ್ ಬಂದ ಮೇಲೆ ಅದು ಅತಿರೇಕ ತಲುಪಿದೆ. ಟಿಕ್‌ಟಾಕ್, ರೀಲ್ಸ್, ವಿಡಿಯೊ ಹಂತ ಹಂತವಾಗಿ ಎಲ್ಲೆಯನ್ನು ಮೀರಿದೆ. ಹಾಗಾಗಿ ಸೀರಿಯಲ್ ಕೂಡ ಅದಕ್ಕೆ ಸಮನ್ವಯದಂತೆ ಬಳಸುತ್ತಿದೆ. ನಿರ್ಮಾಣ ಹಂತದಲ್ಲಿಯೂ ಅದಕ್ಕೆ ಪ್ರತಿರೋಧ ವ್ಯಕ್ತವಾಗುತ್ತದೆ. ನಟರಾಗಿ ನಮಗೂ ಆ ಬಗ್ಗೆ ಆಕ್ಷೇಪ ಇದೆ. ಆದರೆ, ಸಂದರ್ಭಕ್ಕೆ ಹಾಗೆ ಅಣಿಯಾಗುತ್ತಿದ್ದೇವೆ. ಜಗತ್ತು ಅದರ ಹಿಂದೆ ಹೋಗುತ್ತಿರುವುದರಿಂದ ನಾವೂ ಅನಿವಾರ್ಯವಾಗಿ ಹೋಗುತ್ತಿದ್ದೇವೆ. ಆ ಅನಿವಾರ್ಯತೆ ನಮ್ಮ ಜೀವನದ ಭಾಗ ಆಗಬಾರದು ಎನ್ನುವ ಆಶಯ ನನ್ನದೂ.

ಹಿಂದಿನಿಂದಲೂ ನಾಟಕಗಳಲ್ಲಿ ಖಳನಾಯಕನ ಪಾತ್ರವನ್ನು ವಿಜೃಂಭಣೆಯಿಂದ ತೋರಿಸಿದ್ದಾರೆ. ಆತನನ್ನು ಪ್ರತಿನಾಯಕನಂತೆ ಬಿಂಬಿಸುವುದು ಉದ್ದೇಶ. ಆಗ ನಾಯಕನಿಗೆ ಹೆಚ್ಚಿನ ಮೆರುಗು ಸಿಗುತ್ತದೆ. ಕೆಟ್ಟದಿದ್ದರೆ ಒಳ್ಳೆಯದನ್ನು ತೋರಿಸಲು ಸಾಧ್ಯ. ಹಾಲಿಗೆ ಹುಳಿ ಹಿಂಡಿದರೆ ಮಾತ್ರವೇ ಮೊಸರಾಗಲು ಸಾಧ್ಯ. ಒಳ್ಳೆಯದನ್ನು ತೋರಿಸಲು ಕೆಟ್ಟದು ಇರಲೇಬೇಕು. ಎಲ್ಲರೂ ಸಂತೋಷವಾಗಿ ಇರುವಂತೆ ತೋರಿಸಿದರೆ ಕಥೆಯ ಸ್ವಾರಸ್ಯ ಇರುವುದಿಲ್ಲ. ಅದನ್ನು ಮುನ್ನಡೆಸಲೂ ಆಗುವುದಿಲ್ಲ. ಬಜ್ಜಿಯ ಒಳಗೆ ಮೆಣಸಿನಕಾಯಿ ಇರುವಂತೆ ಇದ್ದರೆ ಮಜಾ ಇರುತ್ತದೆ.

■ **ರಾಘವೇಂದ್ರ ಕೆ.**